4ನೇ ಫೆಬ್ರವರಿ 2004

**ನಿವಾಸಿ ವ್ಯಕ್ತಿಗಳಿಗೆ 25,000 ಯುಎಸ್‌ಡಿ ಗೆ (ಅಮೇರಿಕನ್ ಡಾಲರುಗಳಿಗೆ) ಉದಾರೀಕರಣಗೊಳಿಸಿದ ಹಣ ರವಾನೆ ಯೋಜನೆ**

ಮತ್ತಷ್ಟು ಉದಾರೀಕರಣದ ಕ್ರಮಗಳ ಭಾಗವಾಗಿ, ನಿವಾಸಿಗಳಿಗೆ ಯಾವ ಚಾಲ್ತಿ ಖಾತೆ ಅಥವಾ ಬಂಡವಾಳ ಖಾತೆಗೆ ರಿಸರ್ವ್ ಬ್ಯಾಂಕು ಯೋಜನೆಯನ್ನು ರೂಪಿಸಿದೆಯೋ ಆ ಚಾಲ್ತಿ ಖಾತೆ ಅಥವಾ ಬಂಡವಾಳ ಖಾತೆಯ ವ್ಯವಹಾರದ ನಡುವೆ ಯಾವುದೇ ವ್ಯತ್ಯಾಸವಿಲ್ಲದೆ ಯಾವುದೇ ಉದ್ದೇಶಕ್ಕಾಗಿ ಪ್ರತಿ ಕ್ಯಾಲೆಂಡರ್ ವರ್ಷಕ್ಕೆ 25,000ದವರೆಗೆ ಯುಎಸ್‌ಡಿ (ಅಮೇರಿಕನ್ ಡಾಲರ್) ಮೊಬಲಗನ್ನು ಕಳುಹಿಸಲು ಅನುಮತಿಸಲಾಗುವುದು.

ಎಲ್ಲಾ ನಿವಾಸಿ ವ್ಯಕ್ತಿಗಳು, ಈ ಯೋಜನೆಯಡಿ, ಸೌಲಭ್ಯವನ್ನು ಪಡೆಯಲು ಅರ್ಹರಾಗಿರುತ್ತಾರೆ. ಈ ಸೌಲಭ್ಯವು, ಯಾವುದೇ ಚಾಲ್ತಿ ಅಥವಾ ಬಂಡವಾಳ ಖಾತೆಯ ವ್ಯವಹಾರಕ್ಕೆ ಅಥವಾ ಅವುಗಳ ಸಂಯೋಜನೆಗೆ ಪ್ರತಿ ಕ್ಯಾಲೆಂಡರ್ ವರ್ಷಕ್ಕೆ 25,000ದವರೆಗೆ ಯುಎಸ್‌ಡಿ (ಅಮೇರಿಕನ್ ಡಾಲರ್) ಹಣ ಕಳುಹಿಸಲು ಲಭ್ಯವಿದೆ. ಈ ಸೌಲಭ್ಯದಡಿ, ನಿವಾಸಿ ವ್ಯಕ್ತಿಗಳು, ರಿಸರ್ವ್ ಬ್ಯಾಂಕಿನ ಪೂರ್ವಾನುಮೋದನೆಯಿಲ್ಲದೆ, ಭಾರತದ ಹೊರಗೆ ಸ್ಥಿರ ಸ್ವತ್ತು ಅಥವಾ ಷೇರುಗಳು ಅಥವಾ ಇತರ ಆಸ್ತಿಯನ್ನು ಆರ್ಜಿಸಲು ಮತ್ತು ಹೊಂದಿರಲು ಸ್ವತಂತ್ರರಾಗಿರುತ್ತಾರೆ. ವ್ಯಕ್ತಿಗಳು, ರಿಸರ್ವ್ ಬ್ಯಾಂಕಿನ ಪೂರ್ವಾನುಮೋದನೆಯಿಲ್ಲದೆ, ಈ ಯೋಜನೆಯಡಿ ನಿವಾಸಿಗಳು ಹಣವನ್ನು ಕಳುಹಿಸಲು, ಭಾರತದ ಹೊರಗಿನ ಬ್ಯಾಂಕ್‌ನೊಂದಿಗೆ ವಿದೇಶೀ ಕರೆನ್ಸಿ ಖಾತೆಗಳನ್ನು ತೆರೆಯಲು ಮತ್ತು ಹೊಂದಿ ನಿರ್ವಹಿಸಲು ಸಹ ಅರ್ಹರಾಗಿರುತ್ತಾರೆ. ವಿದೇಶಿ ಕರೆನ್ಸಿ ಖಾತೆಯನ್ನು, ಈ ಯೋಜನೆಯಡಿ ಅರ್ಹವಾದ, ಹಣದ ರವಾನೆಗೆ ಸಂಬಂಧಿಸಿದ ಅಥವಾ ಉಂಟಾಗುವ ಎಲ್ಲಾ ವ್ಯವಹಾರ ಮೂಲಕ ಇಡಲು ಉಪಯೋಗಿಸಿಕೊಳ್ಳಬಹುದು.

ಈ ಯೋಜನೆಯಡಿ ಸೌಲಭ್ಯವು, ಈಗಾಗಲೇ ಲಭ್ಯವಿರುವ ಖಾಸಗಿ ಪ್ರಯಾಣ, ವ್ಯಾಪಾರ ಪ್ರಯಾಣ, ಕೊಡುಗೆಯಾಗಿ ಹಣ ಕಳುಹಿಸುವುದು, ದೇಣಿಗೆಗಳು, ವ್ಯಾಸಂಗಗಳು, ವೈದ್ಯಕೀಯ ಚಿಕಿತ್ಸೆ ಮುಂತಾದುವುಗಳ ಜೊತೆ ಸೇರಿದುದಾಗಿದೆ. ಆದಾಗ್ಯೂ, ಈ ಸೌಲಭ್ಯದಡಿ ಹಣ ಕಳುಹಿಸುವುದನ್ನೂ, ವಿದೇಶಿ ವಿನಿಮಯ ನಿರ್ವಹಣ ಕಾಯಿದೆಯಡಿ ನಿರ್ಧಿಷ್ಟವಾಗಿ ನಿಷೇಧಿಸಿದ ಅಥವಾ ಯಾವುದೇ ನಿರ್ಬಂಧಿಸಿದ ವ್ಯವಹಾರ ಲಾಟರಿ, ಪಣ ಪಂದ್ಯಗಳು, ಬಹಿಷ್ಕರಿಸಿದ ನಿಯತಕಾಲಿಕಗಳಂತಹ ಖರೀದಿಗೆ ಚಾಲ್ತಿ ಖಾತೆ ಮೂಲಕ ಹಣದ ರವಾನೆಗಳನ್ನು ಉಪಯೋಗಿಸಿಕೊಳ್ಳಲಾಗದು, ಈ ಯೋಜನೆಯಡಿ ಹಣದ ರವಾನೆಗಳನ್ನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ, ಭೂತಾನ್, ನೇಪಾಳ್, ಮಾರಿಷಸ್ ಅಥವಾ ಪಾಕಿಸ್ಥಾನ ಹಾಗೆಯೇ ಹಣಕಾಸು ಕಾರ್ಯಾಚರಣೆ ದಳವು (ಹಕಾದ) ಅಸಹಕಾರ ದೇಶಗಳು ಮತ್ತು ರಾಜ್ಯ ಕ್ಷೇತ್ರಗಳ ಹಾಗೆ ಗುರುತಿಸಿದ ದೇಶಗಳು ಅಥವಾ ರಿಸರ್ವ್ ಬ್ಯಾಂಕು, ಬ್ಯಾಂಕುಗಳಿಗೆ ಸಲಹೆ ನೀಡಿದ (ಸೂಚಿಸಿದ) ಹೆಚ್ಚಿನ ಅಪಾಯದ ವ್ಯಕ್ತಿಗಳಿಗೆ ಮತ್ತು ಸಂಘಟನೆಗಳಿಗೆ ಮಾಡಲಾಗದು.

ಅರ್ಜಿದಾರರು, ಅವರ ಖಾಯಂ ಖಾತೆ ಸಂಖ್ಯೆ (ಪ್ಯಾನ್) ಯನ್ನು ಒದಗಿಸಬೇಕು ಮತ್ತು ಅವರಿಗೆ ಸೇರಿದ ಹಣ ಕಳುಹಿಸಲಾಗಿದೆಯೆಂದು ಅಧಿಕೃತ ವ್ಯಾಪಾರಿ ಬ್ಯಾಂಕ್‌ಗೆ (ಎಡಿ) ಸ್ಥಿರಪಡಿಸಬೇಕು. ಈ ಸೌಲಭ್ಯವನ್ನು ಅನುಮತಿಸುವಾಗ, ಅಧಿಕೃತ ವ್ಯಾಪಾರಿ ಬ್ಯಾಂಕುಗಳು, ನಿಮ್ಮ ಗ್ರಾಹಕರ ಗುಣಮಟ್ಟಗಳ ತಿಳುವಳಿಕೆ (ಕೆವೈಸಿ) ಸೇರಿದಂತೆ ಯುಕ್ತ ಶ್ರದ್ಧೆಯಿಂದ ನಿರ್ವಹಿಸಲು ನಿರೀಕ್ಷಿಸಲಾಗಿದೆ ಮತ್ತು ಕಪ್ಪು ಹಣವನ್ನು ಬಿಳಿ ಹಣ ಮಾಡುವುದನ್ನು ತಡೆಗಟ್ಟುವ ನಿಯಮಗಳನ್ನು ಪಾಲಿಸಲು ನಿರೀಕ್ಷಿಸಲಾಗಿದೆ.

ಈ ಯೋಜನೆಯ ಕಾರ್ಯಾಚರಣೆಯು ತಕ್ಷಣವೇ ಜಾರಿಗೆ ಬರುತ್ತದೆ.

ಅಜಿತ್ ಪ್ರಸಾದ್
ವ್ಯವಸ್ಥಾಪಕರು

ಪತ್ರಿಕಾ ಪ್ರಕಟಣೆ ಸಂ.: 2003–2004/942